ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 28-07-1971.

*<u>ಆಕಾರನಲ್ಲಿ ನಿರಾಕಾರನನ್ನು ನೋಡುವ ಅಭ್ಯಾಸ</u>* (आकार में निराकार को देखने का अभ्यास)

ಆಕಾರನನ್ನು ನೋಡುತ್ತಲೂ ನಿರಾಕಾರನನ್ನು ನೋಡುವ ಅಭ್ಯಾಸವಾಗಿದೆಯಾ? ಹೇಗೆ ತಂದೆ ಆಕಾರನಲ್ಲಿ ನಿರಾಕಾರ ಆತ್ಮರನ್ನು ನೋಡುತ್ತಾರೆಯೋ, ಹಾಗೆ ತಂದೆಯ ಸಮಾನ ಆಗಿರುವಿರಾ? ಸದ್ಯ ಶ್ರೇಷ್ಠ ವಸ್ತುವಿನ ಕಡೆಗೆ ಎಲ್ಲರ ದೃಷ್ಟಿ, ವೃತ್ತಿ ಹೋಗುತ್ತದೆ. ಹಾಗಾದರೆ ಈ ಆಕಾರನಲ್ಲಿರುವ ಶ್ರೇಷ್ಠ ವಸ್ತು ಯಾವುದು? ನಿರಾಕಾರ ಆತ್ಮ, ಈಗ ಅಂತರವನ್ನು ಅರಿತಿರುವಿರಿ ಮತ್ತು ಮಹಾಮಂತ್ರವನ್ನು ಅರಿತಿರುವಿರಿ ಹಾಗಾದರೆ ರೂಪವನ್ನು ನೋಡುತ್ತೀರೋ ಅಥವಾ ಆತ್ಮನನ್ನು ನೋಡುತ್ತೀರೋ? ಅರಿತಿರುವಿರಿ, ನೋಡಿದಿರಿ, ಇನ್ನೇನು ಉಳಿಯಿತು? ಬಾಕಿ ಸ್ಥಿತವಾಗಿರುವ ಮಾತಿನಲ್ಲಿ ಆಭ್ಯಾಸಿಯಾಗಿದ್ದೀರಾ? (ಪ್ರತಿಯೊಬ್ಬರೂ ತಮ್ಮ ಅನುಭವ ಹೇಳಿದರು) ಅಂತ್ಯದವರೆಗೂ ಮೊದಲನೆಯ ಪಾಠದ ಅಭ್ಯಾಸಿ ಎಂದು ತಿಳಿಯುತ್ತೀರಾ? ಅಂತ್ಯದವರೆಗೂ ಅಭ್ಯಾಸಿಯಾಗಿರುವಿರಾ ಅಥವಾ ಸ್ವರೂಪವಾಗುವಿರಾ? ಅಂತ್ಯದ ಎಷ್ಟು ಸಮಯದ ಮೊದಲು ಈ ಅಭ್ಯಾಸ ಸಮಾಪ್ತಿಯಾಗುವುದು ಮತ್ತು ಅದರ ಸ್ವರೂಪವಾಗುವಿರಿ? ಶರೀರವಿರುವವರೆಗೂ ಅಭ್ಯಾಸಿಯಾಗಿರುವಿರಾ? ಮೊದಲನೆಯ ಪಾಠದ ಸಮಾಪ್ತಿ ಯಾವಾಗ ಆಗುವುದು? ಅಂತ್ಯದವರೆಗೂ ಅಭ್ಯಾಸಿಯಾಗಿರುವೆವು ಎನ್ನುವವರು ಕೈಎತ್ತಿ. "ಆಕಾರನಲ್ಲಿ ನಿರಾಕಾರನನ್ನು ನೋಡುವ ಮಾತು" ಮೊದಲ ಪಾಠದ ಬಗ್ಗೆ ಕೇಳುತ್ತಿದ್ದೇವೆ. ಈಗ ಆಕಾರನನ್ನು ನೋಡುತ್ತಾ ನಿರಾಕಾರನನ್ನು ನೋಡುತ್ತೀರಾ? ಯಾರೊಂದಿಗೆ ಮಾತನಾಡುತ್ತೀರಿ? (ನಿರಾಕಾರನೊಂದಿಗೆ) ಆಕಾರನಲ್ಲಿ ನಿರಾಕಾರನನ್ನು ನೋಡಲು ಬಂದಿರುವಿರಿ. ಇದರಲ್ಲಿ ಅಂತ್ಯದವರೆಗೆ ಅಭ್ಯಾಸಿಯಾಗಿದ್ದರೆ ದೇಹೀ ಅಭಿಮಾನಿಯ ಅಥವಾ ತಮ್ಮ ಮೂಲ ಸ್ವರೂಪದ ಆನಂದ ಅಥವಾ ಸುಖವನ್ನು ಸಂಗಮಯುಗದಲ್ಲಿ ಮಾಡುವುದಿಲ್ಲ. ಸಂಗಮಯುಗದ ಆಸ್ತಿ ಯಾವಾಗ ಸಿಗುತ್ತದೆ? ಸಂಗಮಯುಗದ ಆಸ್ತಿ ಏನಾಗಿದೆ? (ಅತೀಂದ್ರಿಯ ಸುಖ) ಹೋಗುವಾಗ ಅಂತ್ಯದಲ್ಲಿ ಸಿಗುತ್ತದೆಯೇ ಹೇಗೆ? ಆತ್ಮಿಕ ಸ್ವರೂಪವಾಗಿ ನಡೆಯುವುದು ಅಥವಾ ಆತ್ಮನಾಗಿ ನಡೆಯುವುದು ಈ ಅಭ್ಯಾಸವಿಲ್ಲವೇ? ಈಗ ಸಾಕಾರನನ್ನು ಅಥವಾ ಅಕಾರನನ್ನು ನೋಡುತ್ತಾ ಆಕರ್ಷಣೆ ಆ ಕಡೆಗೆ ಹೋಗುತ್ತದೆಯೋ ಅಥವಾ ಆತ್ಮನ ಕಡೆಗೆ ಹೋಗುತ್ತದೆಯೋ? ಆಕಾರನಲ್ಲಿ ನಿರಾಕಾರನನ್ನು ನೋಡುವುದು ಪ್ರಾಕ್ಟಿಕಲ್ ಮತ್ತು ಸಹಜ ಸ್ವರೂಪವಾಗಲೇಬೇಕು. ಇನ್ನೂವರೆಗೂ ಶರೀರವನ್ನು ನೋಡುತ್ತೀರಾ? ಸೇವೆಯಂತೂ ಆತ್ಮರಿಗೇ ಮಾಡುತ್ತೀರಿ. ಭೋಜನ ಸ್ವೀಕಾರ ಮಾಡುವಾಗ ಆತ್ಮನಿಗೆ ತಿನ್ನಿಸುತ್ತೀರಾ ಅಥವಾ ಶಾರೀರಿಕ ಭಾವನೆಯಲ್ಲಿ ಮಾಡುತ್ತೀರಾ? ಏಣಿಯನ್ನು ಇಳಿಯುತ್ತೀರಿ ಮತ್ತು ಏರುತ್ತೀರಾ? ಏಣಿಯ ಆಟ ಚೆನ್ನಾಗಿದೆಯಾ? ಇಳಿಯುವುದು ಮತ್ತು ಏರುವುದು ಯಾರಿಗೆ ಹಿಡಿಸುತ್ತದೆ? ಚಿಕ್ಕ ಮಕ್ಕಳು ಎಲ್ಲಿಯಾದರೂ ಏಣಿಯನ್ನು ನೋಡಿದರೆ ಅವಶ್ಯವಾಗಿ ಏರುತ್ತಾರೆ ಇಳಿಯುತ್ತಾರೆ. ಹಾಗಾದರೆ ಅಂತ್ಯದವರೆಗೆ ಬಾಲ್ಯವೇ ಇರುವುದೇ? ವಾನಪ್ರಸ್ಥಿಯಾಗುವುದಿಲ್ಲವೇ? ಶರೀರದ ವಾನಪ್ರಸ್ಥ ಅವಸ್ಥೆ ಬಂದಾಗಲೂ ನಿಧಾನವಾಗಿ ಬಾಲ್ಯದ ಸಂಸ್ಕಾರಗಳು ಅಳಿಸುತ್ತವೆ. ಹಾಗಾದರೆ ಈ ಏರುವ ಇಳಿಯುವ ಬಾಲ್ಯದ ಆಟ ಎಲ್ಲಿಯವರೆಗೆ? ಆಕಾರದಲ್ಲಿರುವ ನಿರಾಕಾರ ಅವಸ್ಥೆಯಲ್ಲಿದ್ದಾಗ ಸಾಕ್ಷಾತ್ಕಾರಮೂರ್ತಿ ಆಗುವಿರಿ. ಅಂತ್ಯದವರೆಗೆ ಅಭ್ಯಾಸಿಯಾಗಿರುತ್ತೇವೆ ಎಂದು ತಿಳಿದರೆ ಈ ಮೊದಲ ಪಾಠವನ್ನು ಪರಿಪಕ್ವ ಮಾಡುವಲ್ಲಿ ಸಡಿಲವಾಗುವಿರಿ. ಆಮೇಲೆ ನಿರಂತರ ಸಹಜ ನೆನಪು ಅಥವಾ ಸ್ವರೂಪದ ಸ್ಥಿತಿಯ ಸಫಲತೆಯನ್ನು ನೋಡುವುದಿಲ್ಲ. ಶರೀರ ಬಿಟ್ಟಾಗ ಸಫಲರಾಗುವಿರಾ? ಆದರೆ ಇಲ್ಲ, ಈ ಆತ್ಮಿಕ ಸ್ವರೂಪದ ಅನುಭವ ಅಂತ್ಯದ ಮೊದಲೇ ಮಾಡಬೇಕು. ಅನೇಕ ಜನ್ಮ ತಮ್ಮ ದೇಹದ ಸ್ವರೂಪದ ಸ್ಮೃತಿ ಹೇಗೆ ಸಹಜವಾಗಿತ್ತೋ ಹಾಗೆಯೇ ಅಸಲಿ ಸ್ವರೂಪದ ಸ್ಮೃತಿಯ ಅನುಭವವೂ ಸ್ವಲ್ಪ ಸಮಯವಾದರೂ ಮಾಡುವುದಿಲ್ಲವೇ? ಈ ಮೊದಲ ಪಾಠ ಸಮಾಪ್ತಿಯಾಗಿಯೇ ಆಗುವುದು. ಈ ಆತ್ಮ-ಅಭಿಮಾನಿಯ ಸ್ಥಿತಿಯಲ್ಲಿ ಸರ್ವಾತ್ಮರಿಗೆ ಸಾಕ್ಷಾತ್ಕಾರ ಮಾಡಿಸಲು ನಿಮಿತ್ತರಾಗುವಿರಿ. ಹಾಗಾದರೆ ಈ ಮಾತಿನ ಬಗೆಗೆ ಗಮನವಿರಬೇಕು. ಆತ್ಮ ಎಂದು ತಿಳಿಯುವುದು – ತಮ್ಮ ಸ್ವರೂಪದ ಸ್ಥಿತಿಯಲ್ಲಿ ಸ್ಥಿತರಾಗುವುದಲ್ಲವೇ? ಬ್ರಹ್ಮಾಕುಮಾರ ಅಥವಾ

ಬ್ರಹ್ಮಾಕುಮಾರಿ ಎಂದು ಹೇಳುವುದರಿಂದ ಬ್ರಹ್ಮಾ ತಂದೆ ಅಥವಾ ಬ್ರಹ್ಮಾಕುಮಾರನ ಸ್ವರೂಪ ಮರೆಯುತ್ತದೆಯಾ? ಓಡಾಡುತ್ತಾ "ನಾನು ಬ್ರಹ್ಮಾಕುಮಾರನಾಗಿದ್ದೇನೆ " ಇದು ಮರೆಯುತ್ತದೆಯೇ? ಇದು ಯಾವಾಗ ಮರೆಯುವುದಿಲ್ಲವೋ, ಶಿವವಂಶಿಯಾಗಿರುವ ಸಂಬಂಧದಿಂದ ತಮ್ಮ ಆತ್ಮಿಕ ಸ್ವರೂಪ ಏಕೆ ಮರೆಯುತ್ತದೆ? ಬಾಪ್ ದಾದಾ ಎಂದು ಹೇಳುತ್ತೀರಲ್ಲವೇ? "ಶಿವ ತಂದೆ "ಎಂಬ ಶಬ್ದವನ್ನು ಹೇಳುವಾಗ ನಿರಾಕಾರಿ ಸ್ವರೂಪ ಎದುರಿಗೆ ಬರುತ್ತದೆಯಲ್ಲವೇ? ಬ್ರಹ್ಮಾಕುಮಾರನ ಸ್ವರೂಪ ನಡೆದಾಡುತ್ತಾ ಪಕ್ಕಾ ಆದಾಗ ತಮ್ಮ ಶಿವವಂಶಿಯ ಸ್ವರೂಪ ಏಕೆ ಮರೆಯಬೇಕು? ಬ್ರಹ್ಮಾಕುಮಾರ ಆಗಿರುವಿರಿ ಆದರೆ ಶಿವವಂಶಿ ಸ್ವರೂಪ ಅಂತ್ಯದಲ್ಲಿ ಆಗುವುದೇ? ಬಾಪ್ ದಾದಾ ಎಂದು ಒಟ್ಟಿಗೆ ಹೇಳುತ್ತೀರೋ ಅಥವಾ ಬೇರೆ ಬೇರೆ ಹೇಳುತ್ತೀರೋ? "ಬಾಪ್ ದಾದಾ" ಶಬ್ದವನ್ನು ಒಟ್ಟಿಗೆ ಹೇಳುವಾಗ ತಮ್ಮ ಆತ್ಮಿಕ ಸ್ವರೂಪ ಮತ್ತು ಬ್ರಹ್ಮಾಕುಮಾರನ ಸ್ವರೂಪ' ಎರಡೂ ನೆನಪಿರುವುದಿಲ್ಲವೇ? ಈ ಅಭ್ಯಾಸವನ್ನು ಮೊದಲಿಂದಲೇ ಪೂರ್ಣ ಮಾಡಬೇಕು. ಅದಕ್ಕಾಗಿ ಇನ್ನೂ, ಬಹಳ ಮಾತುಗಳು ಉಳಿಯುವವು.

ಅಂತ್ಯದ ಸಮಯ ಹೊಸ-ಹೊಸ ಪರೀಕ್ಷೆಗಳು ಬರುವವು ಎಂದು ಹೇಳಿದ್ದೆವಲ್ಲವೇ? ಆ ಪರೀಕ್ಷೆಗಳನ್ನು ಪಾಸ್ ಮಾಡಿ ಸಂಪೂರ್ಣತೆಯ ಡಿಗ್ರಿ ಪಡೆಯುವಿರಿ. ಈ ಮೊದಲನೆಯ ಪಾಠವೇ ಸ್ಮೃತಿಯಲ್ಲಿ ಇಲ್ಲದಿದ್ದರೆ ಸಂಪೂರ್ಣತೆಯ ಡಿಗ್ರಿಯನ್ನೂ ಪಡೆಯಲಾರಿರಿ. ಡಿಗ್ರಿ ಸಿಗದಿದ್ದರೆ ಏನಾಗುವುದು? ಧರ್ಮರಾಜನ ಡಿಕ್ಕಿ (ನೋಟಿಸ್) ಬರುವುದು. ಆದ್ದರಿಂದ ಈ ಅಭ್ಯಾಸ ಬಹಳ ಪಕ್ಕಾ ಮಾಡಿಕೊಳ್ಳಿ  ಮೊದಲನೆಯ ವಿಕಾರವನ್ನು ಸಂಕಲ್ಪದಿಂದಲೂ ಒಮ್ಮೆಲೇ ತೆಗೆದು ಹಾಕುವ ನಿಶ್ಚಯ ಮಾಡಿದಾಗ ಅದರಲ್ಲಿ ವಿಜಯಿ ಆದಿರಲ್ಲವೇ? ತಮ್ಮ ಪ್ರತಿಜ್ಞೆಯ ಮೇಲೆ ಆಧಾರಿತವಾಗಿದೆ. ಯಾವ ಮಾತಿನ ಪ್ರತೀಜ್ಞೆ ಮಾಡುತ್ತೀರೋ, ಆಗ ಆ ಪ್ರತಿಜ್ಞೆ ಪ್ರತ್ಯಕ್ಷ ರೂಪ ತೆಗೆದುಕೊಳ್ಳುತ್ತದೆ. ಇದು ಅಂತ್ಯದ ಕೋರ್ಸ್ ಎಂದು ತಿಳಿದರೆ, ಮತ್ತೆ ಫಲಿತಾಂಶ ಏನಾಗುವುದು? ಪ್ರ್ಯಾಕ್ಟಿಕಲ್ ಆಗುವುದಿಲ್ಲ. ಪ್ರ್ಯಾಕ್ಟಿಸ್ ನಲ್ಲಿಯೇ ಉಳಿಯುತ್ತದೆ. ಈ ಮಾತುಗಳನ್ನು ಮೊದಲು ದಾಟಬೇಕು. ಒಂದು ವೇಳೆ ಅಂತ್ಯದವರೆಗೆ ದಾಟಿದರೆ ಪೂರ್ಣ ಅತೀಂದ್ರಿಯ ಸುಖದ ಆಸ್ತಿಯನ್ನು ಯಾವಾಗ ಪ್ರಾಪ್ತಿ ಮಾಡಿಕೊಳ್ಳುವಿರಿ? ಕೆಲವು ವಿಷಯಗಳಿಂದ ಪ್ರತಿಯೊಬ್ಬರು ತಮ್ಮ-ತಮ್ಮ ಯಥಾಶಕ್ತಿಯನ್ನು ಮೀರಿ ಅಭ್ಯಾಸ ಮಾಡುವುದರ ಬದಲಾಗಿ ಪ್ರತ್ಯಕ್ಷದಲ್ಲಿ ತಂದಿದ್ದಾರೆ. ಕೆಲವರು ಕೆಲವು ಮಾತುಗಳಲ್ಲಿ, ಇನ್ನೂ ಕೆಲವರು ಮತ್ತೊಂದು ಮಾತಿನಲ್ಲಿ ಪ್ರತ್ಯಕ ಮಾಡಿದ್ದಾರೆ. ಹೇಗೆ ಲೌಕಿಕ ದೇಹ ಸಂಬಂಧದ ಮಾತು ಕೆಲವರಿಗೆ ಅಭ್ಯಾಸದಲ್ಲಿದೆ. ಕೆಲವರಿಗೆ ಪ್ರತ್ಯಕ್ಷದಲ್ಲಿ ಒಂದೇ ಅಲೌಕಿಕ, ಪಾರಲೌಕಿಕ ಸಂಬಂಧದಲ್ಲಿ ಅನುಭವವಿದೆ. ಕನಸಿನಲ್ಲೂ ಸಹ ಎಂದೂ ಸಂಕಲ್ಪ ರೂಪದಲ್ಲಿಯೂ ದೇಹದ ಸಂಬಂಧದ ಕಡೆ ವೃತ್ತಿ-ದೃಷ್ಟಿ ಹೋಗಬಾರದು. ಇದರಲ್ಲಿ ಪಾಂಡವರೂ ಸಹ ಕ್ರಾಸ್ ಮಾಡಬೇಕು. ಲೌಕಿಕವನ್ನು ಅಲೌಕಿಕದಲ್ಲಿ ಪರಿವರ್ತನೆ ಮಾಡುವುದರಲ್ಲಿ ಸ್ಮೃತಿ ಬಂದರೆ ಅದು ಕಲ್ಯಾಣಾರ್ಥವಾಯಿತು. ತಾವಂತೂ ಮಧುಬನ ಭಟ್ಟಿಯಲ್ಲಿ ಇರುವವರಲ್ಲವೇ? ಅಂದಾಗ ಮೊದಲು ಏಣಿಯನ್ನು ಕ್ರಾಸ್ ಮಾಡಬೇಕಲ್ಲವೇ. ಯಾವುದು ಒಂದು ಕ್ಷಣದ ಮೊದಲು ಇರಲಿಲ್ಲವೋ ಅದು ಈಗಿನ ಸೆಕೆಂಡಿನಲ್ಲಿ ಆಗುವುದಿಲ್ಲವೇನು? ಮಧುಬನದ ಪಾಂಡವರು, ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳು ಆಗಿದ್ದೀರಿ. ಯಾವುದೇ ಚಿಕ್ಕ ಗೀತಾ ಪಾಠಶಾಲೆಯ ವಿದ್ಯಾರ್ಥಿಗಳಲ್ಲ. ಅಂದಾಗ ಇವರಿಗೆ ಇಷ್ಟು ನಶೆ ಇರಬೇಕಾಗಿದೆ. ಇವರ ವಿದ್ಯೆ ಎಷ್ಟು ಶ್ರೇಷ್ಠವಾಗಿದೆ? ಅಂತಹ ಅದ್ಭುತ ಮಾಡಿ ತೋರಿಸಬೇಕು. ಯಾವುದರಿಂದ ಒಂದು ಸೆಕೆಂಡಿನ ಮೊದಲು ತಮ್ಮಿಂದ ನಿರಾಸೆ ಇಟ್ಟುಕೊಂಡಿದ್ದೀರೋ ಅವರು ಇನ್ನೊಂದು ಸೆಕೆಂಡಿನಲ್ಲಿ ಆಸೆವುಳ್ಳವರಾಗಬೇಕು. ಮಹಾವೀರ ಸೇನೆ ಏನು ಮಾಡಿತ್ತು? ಇಡೀ ಲಂಕೆಯನ್ನು ಸುಟ್ಟು ಹಾಕಿದರು ಅಂದಾಗ ಏಣಿಯನ್ನು ಪಾಸ್ ಮಾಡಲು  ಸಾಧ್ಯವಿಲ್ಲವೇ. ಮೊದಲನೇ ಏಣಿಯನ್ನು ಹೇಳಲಾಗಿದೆ. ಇನ್ನೊಂದು ಏಣಿ ಕರ್ಮೇಂದ್ರಿಯಗಳ ಮೇಲೆ ವಿಜಯಿ ಆಗುವುದು. ಮೂರನೆಯದು ವ್ಯರ್ಥ ಸಂಕಲ್ಪಗಳು ಮತ್ತು ವಿಕಲ್ಪಗಳ ಮೇಲೆ ವಿಜಯಿ. ಇದು ಕೊನೆಯದಾಗಿದೆ. ಆದರೆ ಬೇರೆಯದನ್ನೂ ಸಹ ಕ್ರಾಸ್ ಮಾಡಬೇಕಾಗುತ್ತದೆ. ಉಮಂಗ-ಉತ್ಸಾಹದಿಂದ ನಾವು ಫುಲ್ ಪಾಸ್ ಆಗಿದ್ದೇವೆ ಎಂದು ಹೇಳಬೇಕು. ಇನ್ನೊಂದು ಏಣಿ ಬಹಳ ಸಹಜವಾಗಿದೆ. ಮರುಜೀವಿಯಾಗಿಬಿಟ್ಟರೆ ಹಳೆಯ ಕರ್ಮೇಂದ್ರಿಯಗಳ ಆಕರ್ಷಣೆ ಏಕೆ? ಮರುಜೀವ ಆದರೆ ಸಮಾಪ್ತಿಯಾಯಿತಲ್ಲವೇ. ಹೇಗೆ ಕೆಲವರು ಇಂತಹವರು ಇಷ್ಟು ಆಯಸ್ಸುವರೆಗೆ ಜೀವಿಸುತ್ತಾರೆ ನಂತರ ಇರುವುದಿಲ್ಲ ಎಂದು ಹೇಳುತ್ತಾರೆ ಆದರೆ ಒಂದುವೇಳೆ ಯಾರಾದರೂ ದಾನ-ಪುಣ್ಯ ಮಾಡಿದರೆ ಹೊಸ ಜನ್ಮದ ರೀತಿ, ಹೊಸ

ಆಯಸ್ಸು ಶುರು ಆಗುತ್ತದೆ. ಅಂದಾಗ ಈ ರೀತಿ ಮರುಜೀವ ಆಗಿ ಅರ್ಥಾತ್ ಎಲ್ಲಾ ಕಡೆಯಿಂದ ಸತ್ತುಹೋಗಿದ್ದೀರಲ್ಲವೇ. ಹಳೆಯ ಆಯಸ್ಸು ಸಮಾಪ್ತಿ ಆಗಿದೆಯಲ್ಲವೇ, ಈಗಂತೂ ಹೊಸ ಜನ್ಮವಾಗಿದೆ. ಇದರಲ್ಲಿ ಬ್ರಹ್ಮಾಕುಮಾರ-ಕುಮಾರಿಯರಂತೂ ಆಗಿದ್ದೇವೆ. ಅಂದಾಗ ಬ್ರಹ್ಮಾಕುಮಾರ-ಕುಮಾರಿಯರಿಗೆ ಕರ್ಮೇಂದ್ರಿಯಗಳ ಮೇಲೆ ವಿಜಯೀ ಆಗದೆ ಇರುವುದು ಸಾಧ್ಯವೇ? ಹಿಂದಿನ ಲೆಕ್ಕಾಚಾರವಂತೂ ಸಮಾಪ್ತಿ ಆಗಿದೆಯಲ್ಲವೇ. ಯಾವಾಗ ಮರುಜೀವ ಆಗಿದ್ದೀರೋ ಆಗ ಬ್ರಹ್ಮಕುಮಾರರೂ ಆದಿರಿ. ಬ್ರಹ್ಮಾಕುಮಾರ ಆಗಿಬಿಟ್ಟರೆ ಕರ್ಮೇಂದ್ರಿಯಗಳಿಗೆ ಹೇಗೆ ವಶರಾಗುತ್ತೀರಿ? ಬ್ರಹ್ಮಾಕುಮಾರರ ಹೊಸ ಜೀವನದಲ್ಲಿ ಕರ್ಮೇಂದ್ರಿಯಗಳಿಗೆ ವಶರಾಗುವ ಜ್ಞಾನದಿಂದಲೂ ದೂರ ಆಗಿಬಿಡುತ್ತಾರೆ. ಈಗ ಶೂದ್ರತನದಿಂದ ಮರುಜೀವ ಆಗಿಲ್ಲವೆಂದರೆ ಈಗ ಆಗುತ್ತೀರೇನು? ಶೂದ್ರತನದ ಸ್ವಲ್ಪವೂ ಸಂಸ್ಕಾರದಲ್ಲಿ ಸಿಲುಕಿಹಾಕಿಕೊಂಡಿಲ್ಲತಾನೇ? ಕೆಲವರ ಶ್ವಾಸ ಸಿಕ್ಕಿಹಾಕಿಕೊಂಡಿರುತ್ತದೆ ಮತ್ತು ಅದು ಮತ್ತೆ ಸ್ವಲ್ಪ ಸಮಯದ ನಂತರ ಪ್ರಕಟವಾಗುತ್ತದೆ. ಇದೂ ಸಹ ಆ ರೀತಿ ಇದೆಯೇನು? ಹಳೆಯ ಸಂಸ್ಕಾರದಲ್ಲಿ ಸಿಲುಕಿಹಾಕಿಕೊಂಡರೆ ಮರುಜೀವ ಎಂದು ಹೇಳುತ್ತಾರೇನು? ಮರುಜೀವ ಆಗಿಲ್ಲವೆಂದರೆ ಬ್ರಹ್ಮಾಕುಮಾರ ಎಂದು ಹೇಗೆ ಹೇಳುವುದು?ಮರುಜೀವ ಅಂತೂ ಆಗಿದ್ದೀರಲ್ಲವೇ, ಬಾಕಿ ಮನಸಾ ಸಂಕಲ್ಪ ಬ್ರಹ್ಮಾಕುಮಾರ ಆದ ನಂತರವೇ ಮಾಯೆ ಬರುತ್ತದೆ. ಶೂದ್ರಕುಮಾರರ ಬಳಿ ಮಾಯೆ ಬರುತ್ತದೆಯೇ? ತಾವು ಏಕೆ ತಬ್ಬಿಬ್ಬಾಗುತ್ತೀರಿ? ಹೇಳಿ ಮರುಜೀವ ಆಗಿದ್ದೀರಾ? ಮರುಜೀವ ಆದ ನಂತರ ಮಾಯೆಗೆ ಚಾಲೆಂಜ್ ಮಾಡಿದ್ದೀರಾ? ಆದ್ದರಿಂದಲೇ ಮಾಯೆ ಬರುತ್ತದೆ. ಅದರ ಜೊತೆ ಯುದ್ಧ ಮಾಡಿ ನಾವು ವಿಜಯೀ ಆಗುತ್ತೇವೆ ಎಂದು ಏಕೆ ಹೇಳುವುದಿಲ್ಲ? ಮಹಾವೀರ ಆದರೆ ತಮ್ಮ ನಡೆಯನ್ನು ಸ್ಥಿರವಾಗಿಟ್ಟುಕೊಳ್ಳಬೇಕಲ್ಲವೇ. ತಮ್ಮನ್ನು ತಾವು ಬ್ರಹ್ಮಾಕುಮಾರ ಎಂದು ತಿಳಿದಾಗ ಕರ್ಮೇಂದ್ರಿಯಗಳ ಎರಡನೇ ಏಣಿ ಯಾವುದಿದೆಯೋ ಅದರಿಂದಲೂ ಪಾರಾಗುತ್ತೀರಿ. ಬ್ರಹ್ಮಾಕುಮಾರ ಅಥವಾ ಶಿವಕುಮಾರ ಎರಡರ ಸ್ಮೃತಿ ಇರುವುದರಿಂದ ಎಂದೂ ಫೇಲ್ ಆಗಲು ಸಾಧ್ಯವಿಲ್ಲ. ಏಕೆಂದರೆ ಬ್ರಹ್ಮಾಕುಮಾರ-ಕುಮಾರಿ ಎಂದು ತಿಳಿಯುವುದರಿಂದ ಬ್ರಹ್ಮಾಕುಮಾರರ ಕರ್ತವ್ಯ, ಬ್ರಹ್ಮಾಕುಮಾರರ ಗುಣ ಯಾವುದೋ ಅದೇ ಸ್ಮೃತಿಯಲ್ಲಿ ಇರುತ್ತೀರಲ್ಲವೇ? ಅಂದಾಗ ಈಗ ಎರಡನೆಯದು ಮತ್ತು ಮೂರನೆಯ ಏಣಿ ಕ್ರಾಸ್ ಮಾಡಲು, ಪಾಸ್ ವಿತ್ ಹಾನರ್ ಮಾಡಲು, ಸಮೀಪ ಬರಲು ಈ ಭಟ್ಟಿಯನ್ನು ಮಾಡಿದ್ದೀರಿ ಅಂದಾಗ ಭಟ್ಟಿಯ ಸಮಾಪ್ತಿಯ ಜೊತೆ ಇದನ್ನೂ ಸಹ ಸಮಾಪ್ತಿ ಮಾಡಬೇಕಾಗಿದೆ. ಹೇಗೆ ನೋಡಿ ಸ್ಥಾನದ ಆಧಾರದ ಮೇಲೆ ಸ್ಥಿತಿ ಆಗುತ್ತದೆ. ಇದು ಮಧುಬನದ ಸ್ಥಾನ ಈ ರೀತಿ ಇದೆ ಯಾವುದು ಸ್ಥಿತಿಯನ್ನೇ ಬದಲಾವಣೆ ಮಾಡಿಬಿಡುತ್ತದೆಯಲ್ಲವೇ. ಸ್ಥಾನದ ಮೇಲೆ ಸ್ಥಿತಿಯ ಪ್ರಭಾವ ಆಗುತ್ತದೆ. ಮತ್ತು ಪ್ರತಿಯೊಬ್ಬರಿಗೆ ತಮ್ಮ ಸ್ಥಾನದ ನಶೆ ಎಷ್ಟು ಇರುತ್ತದೆ? ತಮ್ಮ ದೇಶದ, ತಮ್ಮ ಹದ್ದಿನ ನಿವಾಸಸ್ಥಾನದ ನಶೆ ಇರುವುದಿಲ್ಲವೇ? ಒಂದುವೇಳೆ ದೊಡ್ಡ ಕೋಟೆ ಅಥವಾ ಮಹಲ್‌ನಲ್ಲಿ ನಿವಾಸ ಮಾಡುವವರಾಗಿದ್ದರೆ ಸ್ಥಾನದ ಪ್ರಭಾವ ಸ್ಥಿತಿಯ ಮೇಲೆ ಆದರೆ ತಾವು ಎಲ್ಲರಿಗಿಂತ ಶ್ರೇಷ್ಠ ಸ್ಥಾನದಲ್ಲಿ ಇದ್ದೀರಿ ಇದರ ಪ್ರಭಾವವೂ ಸ್ಥಿತಿಯ ಮೇಲೆ ಇರಬೇಕಾಗಿದೆ. ಶ್ರೇಷ್ಠ ವರದಾನಿ ಭೂಮಿಯ ನಿವಾಸಿ ಅಂದಾಗ ತಮ್ಮ ಸ್ಥಿತಿ ಸಹ ಕೊಡುವಂತಹದ್ದಾಗಿರಬೇಕು.

ಸದಾ ಎಲ್ಲರಿಗೆ ಯಾರು ಸಾಕ್ಷಾತ್ಕಾರ ಮೂರ್ತಿ ಆಗುತ್ತಾರೋ ಅವರು ವರದಾನವನ್ನು ಕೊಡಲು ಸಾಧ್ಯವಾಗುತ್ತದೆ. ಯಾವುದೇ ಭಕ್ತರಿಗೂ ವರದಾನ ಪ್ರಾಪ್ತಿ ಆಗುತ್ತದೆ ಎಂದರೆ ಸಾಕ್ಷಾತ್ಕಾರಮೂರ್ತಿಯ ಮೂಲಕವೇ ಆಗುತ್ತದೆಯಲ್ಲವೇ, ಅಂದಾಗ ಸಾಕ್ಷಾತ್ ಮತ್ತು ಸಾಕ್ಷಾತ್ಕಾರ ಮೂರ್ತಿ ಆಗುವುದರಿಂದಲೇ ವರದಾನ ಮೂರ್ತಿ ಆಗಬಹುದು. ತಂದೆ ದಾತನ ಮಕ್ಕಳು ದಾತ ಆಗಬೇಕು. ತೆಗೆದುಕೊಳ್ಳುವವರಲ್ಲ ಆದರೆ ಕೊಡುವವರಾಗಬೇಕು. ಪ್ರತಿಯೊಂದು ಸೆಕೆಂಡ್ ಪ್ರತಿಯೊಂದು ಸಂಕಲ್ಪದಲ್ಲಿ ಕೊಡಬೇಕು. ದಾತರಾಗಿಬಿಟ್ಟರೆ ದಾತನ ಮುಖ್ಯ ಗುಣ ಯಾವುದು? ಉದಾರಚಿತ್ತರಾಗುತ್ತೀರಿ. ಯಾರು ಅನ್ಯರ ಉದ್ಧಾರಕ್ಕೆ ನಿಮಿತ್ತ ಆಗುತ್ತಾರೆಯೋ ಅವರು ತಮ್ಮ ಉದ್ಧಾರ ಮಾಡಿಕೊಳ್ಳಲು ಸಾಧ್ಯ ಇಲ್ಲವೇ? ಸದಾ ನಾವು ದಾತನ ಮಕ್ಕಳಾಗಿದ್ದೇವೆ ಎಂದು ತಿಳಿಯಬೇಕು. ಒಂದು ಸೆಕೆಂಡೂ ಸಹ ಕೊಡುವುದರ ಬದಲಾಗಿ ಬೇರೆ ಯಾವುದೂ ಇರಬಾರದು. ಅವರಿಗೆ ಮಹಾದಾನಿ ಎಂದು ಹೇಳಲಾಗುತ್ತದೆ. ಸದಾ ಕೊಡುವ ದ್ವಾರವು ತೆರೆದಿರಲಿ, ಹೇಗೆ ಮಂದಿರದ ಬಾಗಿಲು ಸದಾ ತೆಗೆದಿರುತ್ತದೆ. ಇದಂತೂ ಈಗಿನಕಾಲದಲ್ಲಿ ಬಂದ್ ಮಾಡುತ್ತಾರೆ. ಅದೇ ರೀತಿ ದಾತನ ಮಕ್ಕಳು ಕೊಡುವುದರಿಂದ ಎಂದೂ ಬಂದ್ ಆಗುವುದಿಲ್ಲ. ಏನಾದರೂ ಕೊಟ್ಟಿದ್ದೇನೆಯೇ ಎಂದು ಪ್ರತಿ ಕ್ಷಣ, ಪ್ರತಿ

ಸಂಕಲ್ಪವನ್ನು ಪರಿಶೀಲನೆ ಮಾಡಿಕೊಳ್ಳಿ, ತಂದೆಯಿಂದ ತೆಗೆದುಕೊಳ್ಳಬೇಕು. ಅದನ್ನಂತೂ ತೆಗೆದುಕೊಂಡಿರುವಿರಿ. ಈಗ ಕೊಡಬೇಕು. ಏನಾದರೂ ಈಗ ತೆಗೆದುಕೊಳ್ಳುವುದು ಉಳಿದಿದೆಯೇ? ಏನೆಲ್ಲವನ್ನು ತೆಗೆದುಕೊಳ್ಳಬೇಕಿತ್ತೋ ಅದನ್ನು ತೆಗೆದುಕೊಂಡಾಯಿತು. ಇನ್ನು ಕೊಡುವುದು ಉಳಿದಿದೆ. ಎಷ್ಟೆಷ್ಟು ಕೊಡುವುದರಲ್ಲಿ ವ್ಯಸ್ತರಾಗುವಿರೋ, ಅಷ್ಟು ಯಾವ ಮಾತುಗಳನ್ನು ದಾಟುವುದು ಕಷ್ಟವಾಗುವುದೋ, ಅವು ಬಹಳ ಸಹಜವಾಗುವವು. ಏಕೆಂದರೆ ಮಹಾದಾನಿ ಆಗುವುದರಿಂದ ಮಹಾನ್ ಶಕ್ತಿಯ ಪ್ರಾಪ್ತಿ ಸ್ವತಃ ಆಗುವುದು, ಹಾಗಾದರೆ ಈ ಕಾರ್ಯ ಚೆನ್ನಾಗಿದೆಯಲ್ಲವೇ? ಕೊಡಲು ಭಂಡಾರ ಭರಪೂರ್ ಇದೆಯಲ್ಲವೇ? ಇದರಲ್ಲಿ ಪೂರ್ಣ ಪಾಸಾಗಿದ್ದೀರಾ? ಯಾವುದರಲ್ಲಿ ಪೂರ್ಣ ಪಾಸಾಗಿದ್ದೀರೋ ಅದಕ್ಕೆ ಗುರುತಿನ ಚಿಹ್ನೆ ಕೊಡಿ. ಯಾವುದರಲ್ಲಿ ಪಾಸಾಗಬೇಕಾಗಿದೆಯೋ ಅದನ್ನು ಭಟ್ಟಿಯಲ್ಲಿ ಪಾಸ್ ಮಾಡಿಕೊಂಡು ಹೋಗಿ. ಎಷ್ಟು ದಾನಿಯಾಗುವಿರೋ ಅಷ್ಟು ತುಂಬುತ್ತಾ ಹೋಗುವುದು. ಭಂಡಾರ ಭರಪೂರ್ ಆಗಿದ್ದರೆ ಏಕೆ ದಾನಿಯಾಗಬಾರದು? ಇದನ್ನೇ ನಿರಂತರ ಆತ್ಮಿಕ ಸೇವಾಧಾರಿ ಎಂದು ಹೇಳಲಾಗುತ್ತದೆ. ಆದ್ದರಿಂದ ಈ ಭಟ್ಟಿಯಲ್ಲಿ ನಿರಂತರ ಆತ್ಮಿಕ ಸೇವಾಧಾರಿಯಾಗಿ ಹೋಗಿರಿ.

ಎಲ್ಲಿಯವರೆಗೆ ತ್ಯಾಗವಿಲ್ಲವೋ ಅಲ್ಲಿಯವರೆಗೆ ಸೇವಾಧಾರಿಯಾಗಲಾರಿರಿ. ಸೇವಾಧಾರಿಯಾಗುವುದರಿಂದ ತ್ಯಾಗ ಸಹಜ ಮತ್ತು ಸ್ವತಃ ಆಗುವುದು, ಸದಾ ತಮ್ಮನ್ನು ವ್ಯಸ್ತರಾಗಿಟ್ಟುಕೊಳ್ಳುವ ವಿಧಿ ಇದಾಗಿದೆ. ಸಂಕಲ್ಪದಿಂದ, ಬುದ್ಧಿಯಿಂದ, ಸ್ಥೂಲ ಕರ್ಮದಿಂದ ಎಷ್ಟು ಫ್ರೀ ಇರುತ್ತೀರೋ ಅಷ್ಟು ಮಾಯೆ ಅವಕಾಶವನ್ನು ತೆಗೆದುಕೊಳ್ಳುತ್ತದೆ. ಸ್ಥೂಲ ಮತ್ತು ಸೂಕ್ಷ್ಮ ಎರಡೂ ರೂಪದಿಂದ ತಾವು ಸದಾ ಮುಕ್ತರಾಗಿದ್ದರೆ ಮಾಯೆಗೆ ಅವಕಾಶ ಸಿಗುವುದಿಲ್ಲ. ಯಾವ ದಿನ ದೇವತೆಯಾಗಿ ಸ್ಥೂಲ ಕಾರ್ಯವನ್ನೂ ರುಚಿಯಿಂದ ಮಾಡುತ್ತೀರೋ ಆ ದಿನ ಮಾಯೆ ಬಂದಿತ್ತಾ ಎಂದು ಪರಿಶೀಲನೆ ಮಾಡಿ. ಮನುಷ್ಯರಾಗಿ ಮಾಡಿದರೆ ಮಾಯೆಗೆ ಅವಕಾಶವನ್ನು ಕೊಟ್ಟಿರಿ. ಆದರೆ ಸೇವಾಧಾರಿಯಾಗಿ ಮತ್ತು ದೇವತೆಯಾಗಿ ತಮ್ಮ ರುಚಿ. ಉತ್ಸಾಹದಿಂದ ತಮ್ಮನ್ನು ಮುಕ್ತರಾಗಿಟ್ಟುಕೊಂಡು ನೋಡಿ. ಆಗ ಮಾಯೆ ಎಂದಿಗೂ ಬರುವುದಿಲ್ಲ. ಖುಷಿಯಿರುವುದು. ಖುಷಿಯ ಕಾರಣ ಮಾಯೆಗೆ ಎದುರಿಸುವ ಸಾಹಸವಿರುವುದಿಲ್ಲ. ಆದ್ದರಿಂದ ವ್ಯಸ್ತರಾಗಿರುವ ಅಭ್ಯಾಸ ಮಾಡಿ ಎಂದಾದರೂ ಬುದ್ಧಿ ವ್ಯಸ್ತವಾಗಿಲ್ಲದಿದ್ದರೆ ಸ್ವಯಂ ಶಿಕ್ಷಕರಾಗಿ ಬುದ್ಧಿಯಿಂದ ಕೆಲಸ ಮಾಡಿ. ಹೇಗೆ ಈ ಕಾರ್ಯಗಳನ್ನು ಮಾಡುತ್ತೇವೆ ಎಂದು ಸ್ಥೂಲ ಕಾರ್ಯದ ಡೈರಿ ಮಾಡುತ್ತೀರೋ, ಕಾರ್ಯಕ್ರಮ ಮಾಡುತ್ತೀರೋ ಮತ್ತು ಪರಿಶೀಲನೆ ಮಾಡುತ್ತೀರೋ ಅದೇ ರೀತಿ ತಮ್ಮ ಬುದ್ಧಿಯನ್ನು ವ್ಯಸ್ತ ಮಾಡಿಕೊಳ್ಳುವ ದೈನಂದಿನ ಕಾರ್ಯಕ್ರಮ ಮಾಡಬೇಕು. ಕಾರ್ಯಕ್ರಮದಿಂದ ಪ್ರಗತಿಯಾಗುತ್ತದೆ  ಕಾರ್ಯಕ್ರಮ ಇಲ್ಲದಿದ್ದರೆ ಯಾವುದೇ ಕಾರ್ಯ ಸಮಯಕ್ಕೆ ಸರಿಯಾಗಿ ಸಫಲವಾಗುವುದಿಲ್ಲ. ನಿತ್ಯವೂ ಡೈರಿ ಇರಬೇಕು. ಏಕೆಂದರೆ ಎಲ್ಲರೂ ದೊಡ್ಡವರಲ್ಲವೇ? ಗಣ್ಯ ವ್ಯಕ್ತಿಗಳು ಕಾರ್ಯಕ್ರಮವನ್ನು ನಿಗದಿಗೊಳಿಸಿ ನಂತರ ಹೋಗುತ್ತಾರೆ. ಆದ್ದರಿಂದ ತಮ್ಮನ್ನು ಸಹ ಅತಿ ದೊಡ್ಡ ತಂದೆಯವರು ಎಂದು ತಿಳಿದು ಪ್ರತಿ ಕ್ಷಣದ ಕಾರ್ಯಕ್ರಮವನ್ನು ನಿಗದಿಗೊಳಿಸಿ. ಯಾವ ಮಾತಿನ ಪ್ರತೀಜ್ಞೆ ಮಾಡಲಾಗುತ್ತದೆಯೋ, ಅದರಲ್ಲಿ ಇಚ್ಛಾ ಶಕ್ತಿಯಿರುತ್ತದೆ. ಸುಮ್ಮನೆ ವಿಚಾರ ಮಾಡಿದರೆ, ಅದರಲ್ಲಿ ವಿಲ್ ಪವರ್ ಇರುವುದಿಲ್ಲ. ಆದ್ದರಿಂದ ಇದನ್ನು ಮಾಡಲೇಬೇಕು ಎಂದು ಪ್ರತಿಜ್ಞೆ ಮಾಡಿ. ನೋಡೋಣ, ಮಾಡೋಣ ಎಂದಲ್ಲ. ಹೇಗೆ ಸ್ಥೂಲ ಕಾರ್ಯ, ಎಷ್ಟೇ ಹೆಚ್ಚಿದ್ದರೂ ಪ್ರತಿಜ್ಞೆ ಮಾಡುವುದರಿಂದ ಮಾಡುತ್ತೀರಲ್ಲವೇ? ಧೃಡವಾದ ವಿಚಾರವಿಲ್ಲದಿದ್ದರೆ ಮಾಡುವ ವಿಚಾರ ಬರುವುದಿಲ್ಲ. ಆಗ ಅದನ್ನು ಎಂದೂ ಪೂರ್ಣ ಮಾಡಲಾರಿರಿ. ನಂತರ ಅನೇಕ ನೆಪಗಳು ಬರುವವು. ಪ್ರತಿಜ್ಞೆ ಮಾಡದೇ ಇರುವುದರಿಂದ ಸಮಯವೂ ಕಳೆದುಹೋಗುತ್ತದೆ ಮತ್ತು ನೆಪಗಳೂ ಹೋಗುತ್ತವೆ. ಇಂದು ಬುದ್ಧಿಯನ್ನು ಈ ಕಾರ್ಯಕ್ರಮದಲ್ಲಿ ತೊಡಗಿಸಲೇ ಬೇಕು ಎಂದು ಪ್ರತಿಜ್ಞೆ ಮಾಡಬೇಕು. ಭಿನ್ನ ಭಿನ್ನ ಸಮಸ್ಯೆಗಳು, ಪುರುಷಾರ್ಥಹೀನ ಮಾಡುವ ವ್ಯರ್ಥ ಸಂಕಲ್ಪ, ಆಲಸ್ಯ ಮುಂತಾದವು ಬರುವವು ಆದರೆ ವಿಲ್ ಪವರ್ ಇರುವ ಕಾರಣ ಎದುರಿಸಿ ವಿಜಯಿಯಾಗುವಿರಿ. ಅದನ್ನೂ ನಿತ್ಯದ ಡೈರಿ ಮಾಡಿ, ಆಗ ನೋಡಿ, ಹೇಗೆ ಆತ್ಮಿಕ ಪರಿಹಾರ ಕೊಡುವ ಆತ್ಮ ಎಂದು ಎಲ್ಲರಿಗೂ ಕಂಡುಬರುವುದು. ರೂಹ್ ಎಂದು "ಆತ್ಮ" ನಿಗೂ ಹೇಳುತ್ತಾರೆ ಮತ್ತು  "ಸೆಂಟ್"ಗೂ ಹೇಳುತ್ತಾರೆ. ಆದ್ದರಿಂದ ಎರಡೂ ಆಗುತ್ತವೆ. ದಿವ್ಯ ಗುಣಗಳ  ಸುವಾಸನೆಯ ಆಕರ್ಷಣೆ ಎಂದರೆ ಸಾರ, ಅದೂ ಇರುವುದು ಮತ್ತು ಆತ್ಮಿಕ ಸ್ವರೂಪವೂ ಕಂಡು ಬರುವುದು. ಈ ರೀತಿಯ ಗುರಿಯನ್ನಿಟ್ಟುಕೊಳ್ಳಬೇಕು. ರೂಪದ ವಿಸ್ಮೃತಿ ಆತ್ಮನ ಸ್ಮೃತಿಯನ್ನು  ಈ ಭಟ್ಟಿಯಲ್ಲಿ ಮಾಡಿಕೊಂಡು

ಹೋಗಬೇಕು. ಈ ಶರೀರ ಒಂದು ಪೆಟ್ಟಿಗೆ ಎಂಬ ಅನುಭವವಾಗಬೇಕು. ಇದರೊಳಗೆ ಇರುವ ವಜ್ರದ ಜೊತೆಗೆ ಸಂಬಂಧ, ಸ್ನೇಹ..... ಈ ರೀತಿ ಅನುಭವ ಮಾಡಿಕೊಳ್ಳಬೇಕು.

ಮಧುಬನ ನಿವಾಸಿ ಎಂದರೆ ಮಧುರತೆ ಮತ್ತು ಬೇಹದ್ದಿನ ವೈರಾಗ್ಯ, ಬೆಹದ್ದಿನ ವೈರಾಗಿಗಳು ಆತ್ಮವನ್ನೇ ನೋಡುವರು. ನಡೆಯಲ್ಲಿ ಮಧುರತೆ ಮತ್ತು ಮನಸ್ಸಿನಲ್ಲಿ ಬೇಹದ್ದಿನ ವೈರಾಗ್ಯ ವೃತ್ತಿಯಿರಲಿ. ಎರಡೂ ಸ್ಮೃತಿಯಿದ್ದರೆ, "ಗೌರವಯುತವಾದ ತೇರ್ಗಡೆ" ಹೊಂದುವುದಿಲ್ಲವೆ? ಈ ಎರಡೂ ಅರ್ಹತೆಗಳು ತಮ್ಮಲ್ಲಿ ಧಾರಣೆ ಮಾಡಿಕೊಂಡು ಹೋಗಬೇಕು.

ಈ ಸಂಗಮಯುಗದ ಆಹ್ಲಾದಕರ ಸಮಯ ಎಷ್ಟು ಹೆಚ್ಚೋ ಅಷ್ಟು ಒಳ್ಳೆಯದು. ಏಕೆಂದರೆ ಇಡೀ ಕಲ್ಪದಲ್ಲಿ ತಂದೆ ಮತ್ತು ಮಕ್ಕಳ ಮಿಲನ ಮತ್ತೆ ಆಗುವುದಿಲ್ಲವೆಂದು ತಿಳಿದಿದ್ದೀರಿ. ಆದ್ದರಿಂದ ಈ ಸಂಗಮದ ಸಮಯ ದೊಡ್ಡದಾಗಲಿ. ಎಂದು ತಿಳಿಯುತ್ತೀರಿ ಆದರೆ ತಮ್ಮ ದುರ್ಬಲತೆಯಿಂದಲ್ಲ, ಈ ರೀತಿ ಅನುಭವ ಮಾಡಬೇಕು. ಆದ್ದರಿಂದ ನಿವಾಸ-ಸ್ಥಾನದ ಆಧಾರ ತೆಗೆದುಕೊಂಡು ಸ್ಥಿತಿಯನ್ನು ತಯಾರು ಮಾಡಿಕೊಳ್ಳಿ. ಸದಾ ಸದಾಸಿದ್ಧ ಎಂಬ ಗುರಿಯಿರಲಿ. ಇನ್ನೂ ಈ ಅತೀಂದ್ರಿಯ ಸುಖದ ಆಸ್ತಿ ನಿರಂತರ ಅನುಭವ ಮಾಡಲು ಇದ್ದೇವೆ. ನಮ್ಮ ದುರ್ಬತೆಗಾಗಿ ಅಲ್ಲ. ತಮಗೆ ಈ ಹಳೆಯ ಜಗತ್ತು ವಿದೇಶದಂತೆ. ಅನೇಕರು ವಿದೇಶದ ವಸ್ತುಗಳನ್ನು ಸರ್ಶಿಸುವುದಿಲ್ಲ, ನಮ್ಮ ದೇಶದ ವಸ್ತುಗಳನ್ನು ಉಪಯೋಗಿಸೋಣ ಎಂದು ತಿಳಿಯುತ್ತಾರೆ. ಆದ್ದರಿಂದ ಈ ಹಳೆಯ ಜಗತ್ತಿನ ಎಂದರೆ ವಿದೇಶಿ ವಸ್ತುಗಳನ್ನು ಸ್ವರ್ಶ ಮಾಡಬಾರದು. ಸ್ವದೇಶಿ ಅಥವಾ ವಿದೇಶಿ ವಸ್ತುಗಳಿಂದ ಆಕರ್ಷಿತರಾಗುತ್ತೀರಾ? ಸದಾ ನಾವು ಸ್ವದೇಶಿಯರು ಎಂದು ತಿಳಿದುಕೊಳ್ಳುತ್ತೀರಿ. ಈ ವಿದೇಶದ ವಸ್ತುಗಳನ್ನು ಸ್ಪರ್ಶ ಸಹ ಮಾಡುವುದಿಲ್ಲವೇ? ಈ ರೀತಿ ತಮ್ಮ ಉನ್ನತ ದೇಶದ, ಆತ್ಮನ ರೂಪದಿಂದ ಪರಮಧಾಮ ದೇಶವಾಗಿದೆ ಮತ್ತು ಈ ಈಶ್ವರೀಯ ಪರಿವಾರದ ಲೆಕ್ಕದಿಂದ ಮಧುಬನವೇ ತಮ್ಮ ದೇಶವಾಗಿದೆ, ಎರಡೂ ದೇಶಗಳ ನಶೆ ಇರಲಿ. ನಾವು ಸ್ವದೇಶಿಯರಾಗಿದ್ದೇವೆ, ವಿದೇಶದ ವಸ್ತುಗಳನ್ನು ಸ್ಪರ್ಶ ಸಹ ಮಾಡುವುದಿಲ್ಲ. ಈಗ ಶಕ್ತಿಶಾಲಿ ರಚಯಿತರಾಗಿ, ರಚಯಿತನೇ ದುರ್ಬಲನಾದರೆ ಹೇಗೆ ರಚನೆ ಮಾಡುವಿರಿ? ಅಲಂಕಾರಿಯಾಗಿ ಹೋಗಬೇಕು. ಎಲ್ಲರಿಗೂ ಸಾಕ್ಷಾತ್ಕಾರವಾಗುವಂತೆ ನಿರಂತರ ಏಕರಸ ಸ್ಥಿತಿಯಲ್ಲಿ ಸ್ಥಿತರಾಗಿ ತೋರಿಸುವಂತಹ ಉದಾಹರಣೆಯಾಗಬೇಕು. ದ್ವಾಪರದಲ್ಲಿ ಭಕ್ತರು ಸಾಕ್ಷಾತ್ಕಾರ ಮಾಡುವರು. ಆದರೆ ಇಲ್ಲಿ ಇಡೀ ದೈವಿ ಪರಿವಾರ ತಮ್ಮ ಸಾಕ್ಷಾತ್ ಮೂರ್ತಿಯಿಂದ ಸಾಕ್ಷಾತ್ಕಾರ ಮಾಡಬೇಕು. ಜಮಾ ಮಾಡಿಕೊಳ್ಳಬೇಕು. ಸಂಪಾದನೆ ಮಾಡುವುದು ಮತ್ತು ತಿನ್ನುವುದು ಇದನ್ನು 63 ಜನಗಳಿಂದ ಮಾಡುತ್ತಾ ಬಂದಿದ್ದೀರಿ. ಈಗ ಜಮಾ ಮಾಡಿಕೊಳ್ಳುವ ಸಮಯ, ಕಳೆದುಕೊಳ್ಳುವ ಸಮಯವಲ್ಲ. ಒಳ್ಳೆಯದು.

ಯಾವುದೇ ಕರ್ಮ, ಸಂಕಲ್ಪ ಮಾಡುವಾಗ ಲೈಟ್ ಆಗಿ ಮಾಡಿದಾಗ ಕರ್ಮ ಯಥಾರ್ಥವಾಗುವುದು. ಈ ರೀತಿ ಹಗುರ ಪ್ರಕಾಶ ರೂಪ ಎಂದರೆ ಪಾರದರ್ಶಕವಾಗಿ. ಈ ಭಟ್ಟಿ ಪಾಂಡವ ಭವನವನ್ನು ಪಾರದರ್ಶಕ ಚೈತನ್ಯ ಪ್ರದರ್ಶನ ಮಾಡುವುದು ಮತ್ತು ಎಲ್ಲರಿಗೂ ಇದನ್ನು ಹೋಗಿ ನೋಡಬೇಕು ಎಂದು ಸಾಕ್ಷಾತ್ಕಾರ ಮಾಡಿಸುವಂತಹ ಆಕರ್ಷಣೆಯಾಗಬೇಕು. ಎಲ್ಲಾ ಮಾತುಗಳಲ್ಲಿ ವಿಜಯಿಯಾಗಬೇಕು. ಮೊದಲ ನಂಬರನಲ್ಲಿ ಬರಬೇಕು. ಹಳೆಯ ಸಂಕಲ್ಪ, ಸಂಸ್ಕಾರ ಸಮಾವೇಶಗೊಳಿಸಿ ನಾಶಗೊಳಿಸಬೇಕು ಎಂದರೆ ಮತ್ತೆ ಪ್ರಕಟಗೊಳ್ಳದಂತೆ ವಿಲೀನಗೊಳಿಸಬೇಕು. ಏನು ಬೇಕೋ ಅದನ್ನು ಮಾಡಬಹುದು, ಆದರೆ ಇಚ್ಛೆಯಲ್ಲಿ ಧೃಡತೆಯಿರಬೇಕು. ಎಷ್ಟು ವೃತ್ತಿ ಶಕ್ತಿಶಾಲಿಯಾಗಿರುವುದೋ ಅಷ್ಟು ವಾಯುಮಂಡಲವೂ ಶಕ್ತಿಶಾಲಿಯಾಗಿರುತ್ತದೆ. ಯಾವ ಸಮಯದಲ್ಲಾದರೂ ಯಾರಲ್ಲಿಯೇ ದುರ್ಬಲತೆ ಬಂದರೆ ಶಕ್ತಿಶಾಲಿ ವೃತ್ತಿಯ ಸಹಯೋಗ ಸಿಗುವುದರಿಂದ ಮುಂದುವರೆಯಬಹುದು. ತಂದೆ ಏಕರಸವಾಗಿದ್ದಾರೆ. ಆದ್ದರಿಂದ ತಂದೆಯ ಸಮಾನವಾಗಬೇಕು. ಏನಾದರಾಗಲಿ, ಅದನ್ನು ಆಟ ಎಂದು ತಿಳಿದು ಸಮಾಪ್ತಿ ಮಾಡಿ. ಆಟ ಎಂದು ತಿಳಿಯುವುದರಿಂದ ಖುಷಿಯಿರುತ್ತದೆ. ಈಗಿನ ತಿಲಕ ಜನ್ಮ-ಜನ್ಮಾಂತರದ ತಿಲಕಧಾರಿ ಅಥವಾ ಕಿರೀಟಧಾರಿ ಮಾಡುತ್ತದೆ. ಆದ್ದರಿಂದ ಸದಾ ಏಕರಸವಾಗಿರಬೇಕು. ತಂದೆಯನ್ನು ಅನುಸರಿಸಬೇಕು. ಯಾರು ಸ್ವಯಂ ಹರ್ಷಿತರಾಗಿರುತ್ತಾರೋ ಅವರು ಎಂತಹ ಮನದವರನ್ನಾದರೂ ಹರ್ಷಿತ ಪಡಿಸುವನು. ಖುಷಿಯಲ್ಲಿರುವುದು ಜ್ಞಾನದ ಗುಣವಾಗಿದೆ. ಇದರಲ್ಲಿ ಕೇವಲ

ಆತ್ಮೀಯತೆಯನ್ನು ಕೂಡಿಸಿ, ಖುಷಿಯ ಸಂಸ್ಕಾರವೂ ಒಂದು ವರದಾನವಾಗಿದೆ. ಅದು ಸಮಯಕ್ಕೆ ಸರಿಯಾಗಿ ಸಹಯೋಗ ಕೊಡುತ್ತದೆ. ತಮ್ಮ ದುರ್ಬಲ ಸಂಕಲ್ಪ ತಮ್ಮನ್ನು ಬೀಳಿಸಲು ಕಾರಣವಾಗುತ್ತದೆ. ಆದ್ದರಿಂದ ಒಂದು ಸಂಕಲ್ಪವೂ ವ್ಯರ್ಥವಾಗಬಾರದು. ಏಕೆಂದರೆ ಸಂಕಲ್ಪಗಳ ಬೆಲೆ ಈಗ ಗೊತ್ತಾಗಿದೆ. ಸಂಕಲ್ಪ, ಮಾತು, ಕರ್ಮ ಈ ಮೂರೂ ಅಲೌಕಿಕವಾದರೆ ತಮ್ಮನ್ನು ಈ ಲೋಕದ ನಿವಾಸಿ ಎಂದು ತಿಳಿಯುವುದಿಲ್ಲ. ಈ ಪೃಥ್ವಿಯ ಮೇಲೆ ಕಾಲುಗಳಿಲ್ಲ ಎಂದು ತಿಳಿಯುವಿರಿ ಎಂದರೆ ಬುದ್ಧಿಯ ಎಳೆತ ಈ ಜಗತ್ತಿನಲ್ಲಿಲ್ಲ. ಬುದ್ಧಿ ರೂಪದ ಕಾಲು ದೇಹರೂಪಿ ಭೂಮಿಯಿಂದ ಉನ್ನತವಾಗಿದೆ. ಇದು ಖುಷಿಯ ಲಕ್ಷಣವಾಗಿದೆ. ಎಷ್ಟೆಷ್ಟು ದೇಹದ ಭಾವನೆಯಿಂದ ಬುದ್ಧಿ ಮೇಲಕ್ಕೆ ಹೋಗುವುದೋ ಅಷ್ಟು ಅವರು ತಮ್ಮನ್ನು ಪರಿಶ್ತಾ ಎಂದು ತಿಳಿಯುವರು. ಪ್ರತಿಯೊಂದು ಕಾರ್ಯವನ್ನು ಮಾಡುತ್ತಾ ತಂದೆಯ ನೆನಪಿನಲ್ಲಿ ಹಾರುತ್ತಿರಿ. ಆಗ ಆ ಅಭ್ಯಾಸದ ಅನುಭವವಾಗುವುದು. ಹಾರುತ್ತಿದ್ದೇವೆ ಎನ್ನುವಂತೆ ಸ್ಥಿತಿ ಆಗುವುದು, ಓಂ ಶಾಂತಿ.

ಅವ್ಯಕ್ತ ಮುರಳಿ 28-07-1971.

***ಆಕಾರನಲ್ಲಿ ನಿರಾಕಾರನನ್ನು ನೋಡುವ ಅಭ್ಯಾಸ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಯ ಸಮಾನವಾಗಿ ಆಕಾರನಲ್ಲಿ ನಿರಾಕಾರನನ್ನು ನೋಡುವ ಅಭ್ಯಾಸಿ.

2. ನಾನು ದೇಹೀ ಅಭಿಮಾನಿಯಾಗಿ ಸಂಗಮ ಯುಗದ ಆಸ್ತಿ(ವಾರಸತ್ವ)ಯಾದ ಅತೀಂದ್ರಿಯ ಸುಖವನ್ನು ಪ್ರಾಪ್ತಿ ಮಾಡಿಕೊಂಡಿದ್ದೇನೆ.

3. ನಾನು ಆಕಾರದಲ್ಲಿ ಇರುತ್ತಲೂ ನಿರಾಕಾರ ಸ್ಥಿತಿಯಲ್ಲಿ ಇರುವ ಸಾಕ್ಷಾತ್ಕಾರ ಮೂರ್ತಿ.

4. ನಾನು ಬಾಲ್ಯದ ಸಂಸ್ಕಾರಗಳನ್ನು ಸಮಾಪ್ತಿ ಮಾಡಿಕೊಂಡು ವಾನಪ್ರಸ್ತಿಯಾಗಿ ನಿರಂತರ ಸಹಜ ಸ್ಮೃತಿ ಸ್ವರೂಪದ ಸಫಲತೆಯನ್ನು ಪಡೆದಿದ್ದೇನೆ.

5. ನಾನು ಶಿವ ವಂಶಿ ಸ್ವರೂಪ, ಬ್ರಹ್ಮ ವಂಶಿ ಸ್ವರೂಪ ಎಂಬ ಎರಡು ಸ್ವರೂಪದ ವೃತ್ತಿಯ ಸ್ಮೃತಿ ಸ್ವರೂಪ.

6. ನಾನು ಪರೀಕ್ಷೆಗಳಲ್ಲೆಲ್ಲವನ್ನು ದಾಟಿ ಸಂಪೂರ್ಣತೆ ಎಂಬ ಡಿಗ್ರಿಯನ್ನು ಪಡೆದಿದ್ದೇನೆ.

7. ನಾನು ವೃತ್ತಿ ಮತ್ತು ದೃಷ್ಟಿಯನ್ನು ಲೌಕಿಕದಿಂದ ಅಲೌಕಿಕಕ್ಕೆ ಪರಿವರ್ತನೆ ಮಾಡಿಕೊಂಡಿದ್ದೇನೆ.

8. ನಾನು ದೇಹೀ ಅಭಿಮಾನಿಯಾಗಿ ಕರ್ಮೇಂದ್ರಿಯಗಳ ಮೇಲೆ ವಿಜಯವನ್ನು ಹೊಂದಿ, ವ್ಯರ್ಥ ಸಂಕಲ್ಪಗಳು, ವಿಕಲ್ಪಗಳನ್ನು ಸಮಾಪ್ತಿ ಮಾಡಿ, ಸಮರ್ಥವಾಗಿ ಫುಲ್ ಪಾಸ್ ಆಗಿದ್ದೇನೆ.

9. ನಾನು ನನ್ನಲ್ಲಿರುವ ಹಳೆಯ ಸಂಸ್ಕಾರಗಳನ್ನು ಸಮಾಪ್ತಿ ಮಾಡಿಕೊಂಡು ಮರುಜೀವ ಆಗಿದ್ದೇನೆ.

10. ನಾನು ಸಾಕ್ಷಾತ್ ಮತ್ತು ಸಾಕ್ಷಾತ್ಕಾರ ಮೂರ್ತಿಯಾಗಿ ಪ್ರತಿ ಕ್ಷಣ, ಪ್ರತಿ ಸಂಕಲ್ಪದಲ್ಲಿ ವರದಾತನ ಮಗುವಾಗಿದ್ದೇನೆ.

11. ನಾನು ಇತರರ ಉದ್ಧಾರಕ್ಕೆ ನಿಮಿತ್ತವಾದ ಉದಾರ ಚಿತ್ತ ಸ್ವರೂಪ.

12. ನನ್ನ ಕೊಡುವ ಕೈ ಸದಾ ತೆರೆದೇ ಇರುವ ಮಹಾದಾನಿ.

13. ನಾನು ನಿರಂತರ ಆತ್ಮಿಕ ಸೇವಾಧಾರಿ.

14. ನಾನು ಸಂಕಲ್ಪ, ಬುದ್ಧಿ, ಸ್ಥೂಲ ಕರ್ಮದಲ್ಲಿ ಹಗುರವಾಗಿರುವ ಮಾಯಾಜೀತ್ ಸ್ವರೂಪ.

15. ನಾನು ಪ್ರತಿಕ್ಷಣದ ಕಾರ್ಯಕ್ರಮವನ್ನು ಫಿಕ್ಸ್ ಮಾಡಿಕೊಂಡು ಬುದ್ಧಿಯನ್ನು ವ್ಯಸ್ತವಾಗಿಟ್ಟುಕೊಂಡು ಉನ್ನತಿಯನ್ನು ಪಡೆದಿದ್ದೇನೆ.

16. ನಾನು ಆತ್ಮದ ಸ್ವರೂಪದಿಂದ ದಿವ್ಯ ಗುಣಗಳ ಸುವಾಸನೆಯೊಂದಿಗೆ ಎಲ್ಲರನ್ನು ಆಕರ್ಷಿಸಿದ್ದೇನೆ.

17. ನಾನು ನಡವಳಿಕೆಯಲ್ಲಿ ಮಧುರತೆ ಮತ್ತು ಮನಸ್ಸಿನಲ್ಲಿ ಬೇಹದ್ ವೈರಾಗ್ಯ ವೃತ್ತಿ ಯನ್ನು ಸ್ಮೃತಿಯಲ್ಲಿ ಇಟ್ಟುಕೊಂಡು ಧಾರಣೆ ಮಾಡಿ ಪಾಸ್ ವಿತ್ ಆನರ್ ಆಗಿದ್ದೇನೆ.

18. ನಾನು ಲಕ್ಷ್ಯವನ್ನು ಎದುರಿಗಿಟ್ಟುಕೊಂಡಿರುವ ಎವರ್ ರೆಡಿ ಸ್ವರೂಪ.

19. ನಾನು ವಿದೇಶಿ ವಸ್ತುಗಳನ್ನು (ಹಳೆಯ ಪ್ರಪಂಚ, ಹಳೆಯ ಸಂಸ್ಕಾರಗಳನ್ನು) ಸ್ಪರ್ಶಿಸದ ಸ್ವದೇಶಿ. (ಪರಂಧಾಮ ನಿವಾಸಿ).

20. ನಾನು ಶಕ್ತಿಶಾಲಿ ರಚಯಿತ ಮತ್ತು ಅಲಂಕಾರಿಯಾಗಿ ಏಕರಸ ಸ್ಥಿತಿಯಲ್ಲಿ ಇರುತ್ತಾ ಉದಾಹರಣೆಯಾಗಿ ಎಲ್ಲರಿಗೂ ಸಾಕ್ಷಾತ್ಕಾರ ಮಾಡಿಸಿದ್ದೇನೆ.

21. ನನ್ನ ಶಕ್ತಿಶಾಲಿ ಆಲೋಚನೆಯಿಂದ ಶಕ್ತಿಶಾಲಿ ವಾಯುಮಂಡಲವನ್ನು ತಯಾರು ಮಾಡಿದ್ದೇನೆ.

22. ನಾನು ಶಕ್ತಿಶಾಲಿ ವೃತ್ತಿಯ ಸಹಯೋಗದಿಂದ ಎಲ್ಲರನ್ನೂ ಉನ್ನತಿಯ ಕಡೆ ಕರೆದುಕೊಂಡು ಹೋಗುವ ತಂದೆಯ ಸಮಾನ ಸ್ವರೂಪ.

23. ನಾನು ನಿರಂತರ ತಿಲಕವನ್ನು ಧರಿಸಿ ಜನ್ಮ ಜನ್ಮಗಳಿಗೆ ತಿಲಕಧಾರಿ, ಕಿರೀಟಧಾರಿ ಆಗಿದ್ದೇನೆ.

24. ನಾನು ಸ್ವಯಂ ಹರ್ಷಿತವಾಗಿ ಇರುತ್ತಾ ಸರ್ವರನ್ನು ಹರ್ಷಿತ ರನ್ನಾಗಿ ಮಾಡಿದ್ದೇನೆ.

25. ನಾನು ಸಂಕಲ್ಪ, ಮಾತು, ಕರ್ಮ ಮೂರನ್ನು ಅಲೌಕಿಕವಾಗಿ ತಯಾರು ಮಾಡಿಕೊಂಡು, ದೇಹಾಭಿಮಾನದಿಂದ ಬುದ್ಧಿಯನ್ನು ಅತೀತವಾಗಿಸಿಕೊಂಡು ಪರಿಶ್ತಾ ಆಗಿರುವ ಅನುಭವ ಮಾಡಿಕೊಂಡಿದ್ದೇನೆ.